# ಶಿಕ್ಷಕರೇ ಗಮನಿಸಿ



ಶಿಕ್ಷಣವು 'ಚಾರಿತ್ರ್ಯನಿರ್ಮಾಣ'ವನ್ನು ಉಂಟು ಮಾಡಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅದನ್ನು ಹೇಗೆ ಮಾಡುವುದು? ಅದಕ್ಕಾಗಿ ಕೆಲವು ಸಲಹೆಗಳನ್ನು ದಯವಿಟ್ಟು ಗಮನಿಸಿ, ನಿಮ್ಮ ತರಗತಿಗಳಲ್ಲಿ ಅನುಷ್ಠಾನ ಮಾಡಲು ಪ್ರಯತ್ನಿಸಿ:

1. ಪ್ರತಿಯೊಬ್ಬ ಮಾನವನ ವ್ಯಕ್ತಿತ್ವದಲ್ಲಿಯೂ 'ಆಧ್ಯಾತ್ಮಿಕ ಆಯಾಮ' ಎನ್ನುವುದು ಇದೆ. ಅದೇ ದೈವೀಚೈತನ್ಯದ ಕೇಂದ್ರ. ನಮ್ಮ ದೈಹಿಕ, ಮಾನಸಿಕ, ಭಾವನಾತ್ಮಕ ಶಕ್ತಿಗಳೆಲ್ಲವೂ ಚೈತನ್ಯವನ್ನು ಪಡೆದುಕೊಳ್ಳುವುದು ಅದರಿಂದಲೇ. ಅದರ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿರಿ. ಅದರ ಪ್ರಜ್ಞೆ ಉಂಟಾಗಲು ನೈತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಆಚರಣೆಗೆ ತರಬೇಕು ಎಂದು ಹೇಳಿಕೊಡಿ.

2. ಮಾನಸಿಕ ಮತ್ತು ದೈಹಿಕ ಶಕ್ತಿಗಳನ್ನು ಪೋಲು ಮಾಡದೆ ರಕ್ಷಿಸಿಕೊಳ್ಳಬೇಕಾದ ಅಗತ್ಯವನ್ನು ಮಕ್ಕಳಿಗೆ ಒತ್ತಿಹೇಳಿ. ಇದರಿಂದ ಅವರು ಸಕ್ರಿಯಾತ್ಮಕ ಚಾರಿತ್ರ್ಯವನ್ನು ಬೆಳೆಸಿಕೊಳ್ಳುತ್ತಾರೆ. ಹಾಗೂ ಜೀವನದ ಸವಾಲುಗಳನ್ನು ಬುದ್ಧಿವಂತಿಕೆಯಿಂದಲೂ, ಧೈರ್ಯದಿಂದಲೂ ಎದುರಿಸಬಲ್ಲ ಶಕ್ತಿಶಾಲಿ ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತಾರೆ.

3. ನಮ್ಮ ಭಾರತೀಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವಂತಹ ಅಧ್ಯಯನ ಹಾಗೂ ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಿ. ಆ ಮೂಲಕ, ಅವರು ನಮ್ಮ ತಾಯಿನಾಡಿನ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಂಪತ್ತಿನ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವಂತೆ ಆಗುತ್ತದೆ. ಈ ಮಕ್ಕಳು ದೊಡ್ಡವರಾದಾಗ, ತಾವು ಕಂಡುಕೊಂಡ ಭವ್ಯ ಪರಂಪರೆಯ ಸಂಪತ್ತನ್ನು ತಮ್ಮ ಮುಂದಿನ ಪೀಳಿಗೆಯವರಿಗೆ ರವಾನಿಸಲು ಇದರಿಂದ ಅನುಕೂಲವಾಗುತ್ತದೆ.

4. ಈಗಿನ ಕಾಲದಲ್ಲಿ ಬೆಳೆಸಿಕೊಳ್ಳಬೇಕಾದ ನೂತನ ವೈಜ್ಞಾನಿಕ ಮತ್ತು ತಾಂತ್ರಿಕ ಮೌಲ್ಯಗಳನ್ನು, ಪುರಾತನ ಸಾಂಪ್ರದಾಯಿಕ ಮೌಲ್ಯಗಳೊಡನೆ ವಿದ್ಯಾರ್ಥಿಗಳು ಸಮನ್ವಯ ಮಾಡಿಕೊಳ್ಳುವ ಆವಶ್ಯಕತೆ ಇಂದು ಬಹಳವಾಗಿ ಇದೆ. ಆ ಮೂಲಕ ಅವರು ಆಧುನಿಕ ಸಮಾಜದಲ್ಲಿ ಬೀಡುಬಿಟ್ಟಿರುವ ಅಧಿಕಾರ, ಹಣ, ಕೀರ್ತಿ ಮುಂತಾದ ತಪ್ಪು ಮೌಲ್ಯಗಳಿಗೆ ಆಕರ್ಷಿತರಾಗಿ, ಕೆಟ್ಟಮಾರ್ಗವನ್ನು ತಳೆಯುವುದು ತಪ್ಪುತ್ತದೆ. ಅದನ್ನು ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ದಯವಿಟ್ಟು ಮಾರ್ಗದರ್ಶನ ನೀಡಿ. ಇದರ ಬಗ್ಗೆ ಸಹಾಯಕ ಸೂತ್ರಗಳನ್ನು ಸ್ವಾಮಿ ವಿವೇಕಾನಂದರ **'ಕೊಲೊಂಬೋ ಇಂದ ಆಲ್ಮೋರಕೆ'** ಎಂಬ ಪುಸ್ತಕದಿಂದ ಪಡೆದುಕೊಳ್ಳಬಹುದು. ಅಥವಾ ಅದರ ಸಂಗ್ರಹವಾದ **'ರಾಷ್ಟ್ರ ನಿರ್ಮಾಣ'** ಎಂಬ ಪುಸ್ತಕದ ಪ್ರಯೋಜನವನ್ನೂ ಪಡೆದುಕೊಳ್ಳಬಹುದು (ಈ ಎರಡು ಪುಸ್ತಕಗಳೂ ಹತ್ತಿರದ ರಾಮಕೃಷ್ಣ ಆಶ್ರಮಗಳಲ್ಲಿ ಲಭ್ಯವಿರುತ್ತವೆ).

5. ವಿದ್ಯಾರ್ಥಿಗಳು ತಮ್ಮ ಸುತ್ತಲಿನ ಸಮಾಜ ಮತ್ತು ವ್ಯಕ್ತಿಗಳೊಡನೆ ಸುಮಧುರ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಅವರ ವೈಯಕ್ತಿಕ ಜೀವನ ಮತ್ತು ರಾಷ್ಟ್ರದ ಸಾಮಾಜಿಕ ಜೀವನ ಉತ್ತಮಗೊಳ್ಳುತ್ತದೆ. ಹೀಗಾಗಿ ಉತ್ತಮ ಮಾನವೀಯ ಮೌಲ್ಯಗಳು, ಸತ್ಯನಿಷ್ಠೆ, ಮೃದುವಾದ ನಡವಳಿಕೆ, ಮಧುರವಾದ ಮಾತು, ಘನತೆವೆತ್ತ ಹಾವಭಾವ – ಇವನ್ನು ಗಳಿಸಿಕೊಳ್ಳುವತ್ತ ಅವರ ಗಮನವನ್ನು ಸೆಳೆಯಿರಿ. ಬರೀ ಬರಡು ಬೋಧನೆ ಮಾಡುವುದಕ್ಕಿಂತ ಆದರ್ಶ ವ್ಯಕ್ತಿಗಳ ಉದಾಹರಣೆ ನೀಡುವುದು ಒಳ್ಳೆಯದು. ಅದಕ್ಕಿಂತಲೂ ಶಿಕ್ಷಕರಾದ ನಾವೇ ಆ ಗುಣಗಳನ್ನು ನಮ್ಮ ಜೀವನದಲ್ಲಿ ತಂದುಕೊಂಡು, ನಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗುವುದು ಇನ್ನೂ ಉತ್ತಮ.


6. ಸಮಾಜ ಮತ್ತು ದೇಶದ ಒಳಿತಿಗೆ ಅದರ ಪ್ರತಿಯೊಬ್ಬ ಪ್ರಜೆಯೂ ಜವಾಬ್ದಾರನಾಗಿರುತ್ತಾನೆ. ಈ ಜವಾಬ್ದಾರಿ ಭಾವನೆಯನ್ನು ಮಕ್ಕಳಲ್ಲಿ ಮೂಡಿಸುವುದು ಕೂಡ ಬಹಳ ಅವಶ್ಯವಾದುದು. ಹಾಗೆಯೇ ಕರ್ತವ್ಯ ಪ್ರಜ್ಞೆ ಕೂಡ. ನಮ್ಮ ದೇಶದ ಏಳ್ಗೆಗೆ ನಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಹೀಗೆ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ತಿಳಿದು ಆಚರಿಸುವ ವಿದ್ಯಾರ್ಥಿಗಳು ಮುಂದೆ ಪ್ರಬುದ್ಧ ಪ್ರಜೆಗಳಾಗುತ್ತಾರೆ.

# ಸಂತ ಶ್ರೇಷ್ಠ ಕವಿ

# ಸ್ವಾಮಿ ವಿವೇಕಾನಂದ

(ಹಿಂದಿನ ಸಂಚಿಕೆಯಿಂದ)

ಜಯಪ್ಪ ಹೊನ್ನಾಳಿ



ಸ್ವಾಮೀಜಿಯವರ ವೈಚಾರಿಕ ಪ್ರಜ್ಞೆಗೆ 'ಜೀವಂತ ಭಗವಂತ' ಕಾಣಿಸುತ್ತಾನೆ. ಈ ಶೀರ್ಷಿಕೆಯ ಕವಿತೆ ಪತ್ರರೂಪದಲ್ಲಿ ಅಮೆರಿಕೆಯ ಸ್ನೇಹಿತನಿಗೆ ಬರೆಯಲ್ಪಟ್ಟಿದೆ. ಮನುಷ್ಯನಲ್ಲೇ ಮಹಾದೇವನನ್ನು ಕಾಣುವ ವಿವೇಕಾನಂದರ ಮಹಾಚೇತನ ಹೇಳುವುದಿಷ್ಟೇ;

**ಯಾರು ನಿನ್ನೊಳ ಹೊರಗ ತುಂಬುತ**
**ದುಡಿವಲ್ಲಿ ಕೈಯಾಗಿರುವನೊ**
**ನಡೆವಲ್ಲಿ ಕಾಲಾಗಿರುವನೊ**
**ಅವನನಾರಾಧಿಸುತ ಮುರಿದೆಸೆ**
**ಮಿಕ್ಕ ಮೂರ್ತಿಗಳೆಲ್ಲವ!**

**'ಮುನ್ನವೇ ಅರಳಿದ ನೀಲ ಕುಸುಮಕೆ'** ಕವಿತೆಯಲ್ಲಿ ಸ್ವಾಮೀಜಿ, ಒಮ್ಮೊಮ್ಮೆ ವಸಂತ ಬರುವ ಮೊದಲೇ ಅರಳುವ ವೈಲೆಟ್ ಪುಷ್ಪಕ್ಕೆ ನಿರ್ದೇಶನ ನೀಡಿದ್ದಾರೆ. ವಸಂತ ಋತು ಬರುವವರೆಗೂ ಕಾಯದೇ, ಚಳಿ ಇರುವಾಗಲೇ ಆತುರಪಟ್ಟು ಅರಳಿದ್ದರಿಂದ ಶೀತಲ ಮಾರುತನ ವಿರುದ್ಧ ಸೆಣ ಸಾಡಲೇ ಬೇಕಾಗುತ್ತದೆಂದೂ, ಹಾಗಾಗಿ ಪ್ರತಿಕೂಲ ಪರಿಸ್ಥಿತಿಗೆ ಎದೆಗುಂದದೆ ನಿಲ್ಲಬೇಕೆಂದೂ ಆ ಹೂವಿಗೆ ಕರೆಕೊಟ್ಟಿದ್ದಾರೆ. ಈ ನೆಪದಲ್ಲಿ ನ್ಯೂಯಾರ್ಕಿನ ತಮ್ಮ ಶಿಷ್ಯೆ ಸೋದರಿ ಕ್ರಿಸ್ಟಿನಾಗೆ ಆತ್ಮಸ್ಥೈರ್ಯ ತುಂಬುವ ಆಶಯ ಸ್ವಾಮೀಜಿಯವರದಾಗಿದೆ.

**ಸವಿಗಂಪ ಪಸರಿಸುವ ನೀಲಕೋಮಲ ಸುಮವೇ,**
**ನಿನ್ನತನವನ್ನೆಂದೂ ನೀ ಬಿಡದಿರು;**
**ಕೇಳದಿದ್ದರು ಸರಿಯೆ, ನಿನ್ನ ಪರಿಮಳದೊಲವ**
**ಸವಿಧಾರೆಯನು ಸತತ ಹರಿಸುತ್ತಿರು !**

ಪರಿಮಳದ ಮೂಲದಂತೆ ರಹಸ್ಯಪ್ರಕ್ರಿಯೆಯಾದ ಕಾವ್ಯದಲ್ಲಿಯೂ ತಮ್ಮ ಜೀವಿತದ ಉದ್ದೇಶವನ್ನು, ಆತ್ಮಗತವಾಗಿದ್ದ ಆಶಯವನ್ನು ಹಾಡುವ ಸ್ವಾಮೀಜಿಯವರ ಕಾವ್ಯದ ಸೃಷ್ಟಿ ಪ್ರಕ್ರಿಯೆಯು, ಅನುಭವ ಅನುಭಾವಗಳ ಸಂಗಮವಾದ ನಿರ್ಮಮಕಾರ ದೃಷ್ಟಿಯಲ್ಲಿ, ವ್ಯಷ್ಟಿ – ಸಮಷ್ಟಿಗಳ ಸಮ ಸಂಭ್ರಮದ ಪಾತಳಿಯ ಮೇಲೆ, ತನ್ನತನದ ಮುದ್ರೆಯೊಂದಿಗೆ ಬೆಳೆದಿರುವಂಥದ್ದು. ಸಾಮಾಜಿಕ ಜವಾಬ್ದಾರಿ ಮತ್ತು ವಿಶ್ವಬದ್ಧತೆ ಅದನ್ನು ನಿರಂತರವಾಗಿ ಮುನ್ನಡೆಸಿದೆ. ಹಾಗಾಗಿಯೇ ಅವರು ಈ ಕವಿತೆಯಲ್ಲಿ ಒಳಿತನ್ನು ಮಾಡುವವರು, ಲೋಕ ಎಸಗಬಹುದಾದ ಎಲ್ಲ ತೊಂದರೆ ತ್ರಾಸ ತಾಪತ್ರಯಗಳನ್ನೂ ಎದುರಿಸಿ ಮುನ್ನುಗ್ಗು ತ್ತಿರಬೇಕೆಂಬ ದೂರದೃಷ್ಟಿಯ ಸದಾಶಯವನ್ನು ನೀಡಿದ್ದಾರೆ.

ಇದನ್ನು ನಾವು ಬಸವಣ್ಣ ಮೊದಲಾಗಿ ಗಾಂಧೀಜಿಯವರಿಗೂ, ಅಷ್ಟೇ ಏಕೆ ಬ್ರಹ್ಮಾಂಡ ಪ್ರಜ್ಞೆಯ ಆರಾಧಕರಾದ ಸ್ವತಃ ಸ್ವಾಮೀಜಿ ಯವರಿಗೂ ಅನ್ವಯಿಸಬಹುದು. ೧೨ನೇ ಶತಮಾನದ ಬಸವಣ್ಣ ನನ್ನು ನಮಗೆ ಈಗಲೂ, ಅಂದರೆ, ೨೧ನೇ ಶತಮಾನದಲ್ಲೂ ದರ್ಶಿಸಿ ಸಂಪೂರ್ಣ ಜೀರ್ಣಿಸಿಕೊಳ್ಳಲಾಗುತ್ತಿಲ್ಲ. ಅವನ ವಿಶ್ವಪ್ರಜ್ಞೆಯ ವಿಚಾರಧಾರೆಗಳಿಗೆ ವಾರಸುದಾರರಾಗಲು ನಮಗೆ ಸಾಧ್ಯವಾಗುತ್ತಿಲ್ಲ. ಹಾಗಾಗಿ